ಸಿ.ಸಿ .ನಂ. 120/2022 ಪಿಡಬ್ಲೂಃ 1

ದಿನಾಂಕಃ 19-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಆರ್ ಜಿ ಎನ್ ವಕೀಲರಿಂದಃ**

9. ಇಂದು ಸಿಸಿ ನಂ. 2303/2024 ಹೆಚ್ಚುವರಿ ಸಿವಿಲ್ ನ್ಯಾಯಾಲಯ, ಕುಮಟಾ ಈ ಕೇಸಿನಲ್ಲಿ ಹೇಳಿರುವ ಸಾಕ್ಷ್ಯ ನಿಜ ಇದೆ . ರಮೇಶ ಶಂಕರ ಅಂಬಿಗ, ಚಂದ್ರಕಾಂತ ಕುಸ್ಲು ಹರಿಕಂತ್ರ , ದಿನೇಶ ಅಂಬಿಗ ಇವರೆಲ್ಲ ನನಗೆ ಮೊದಲಿನಿಂದ ಪರಿಚಯ ಎಂದರೆ ಸಾಕ್ಷಿ ನನಗೆ ಪರಿಚಯ ಇಲ್ಲ , ಆರೋಪಿಗೆ ಪರಿಚಯ ಇದ್ದಾರೆ ಎಂದು ನುಡಿದಿರುತ್ತಾರೆ . ಆರೋಪಿಯೇ ಈ ಮೊದಲು ಮೇಲೆ ಹೇಳಿದ ಹೆಸರಿನ ವ್ಯಕ್ತಿಗಳನ್ನು ನನ್ನ ಹತ್ತಿರ ಕರೆದುಕೊಂಡು ಬಂದಿದ್ದರು. 2018 ಕರಾರು ಆಗುವ ಸಮಯದಲ್ಲಿ ಕರೆದುಕೊಂಡು ಬಂದಿದ್ದರು. ಬೋಟಿನ ವ್ಯವಹಾರ ಕರಾರಿನ ಆಧಾರದ ಮೇಲೆ ನಡೆದಿದೆ. ಕರಾರನ್ನು ಗೋವಾದಲ್ಲೇ ಟೈಪ್ ಮಾಡಲಾಗಿದೆ . ಬಾಂಡ್ ನ್ನು ಕೂಡ ಗೋವಾದಲ್ಲೇ ಖರೀದಿಸಲಾಗಿತ್ತು . ಕರಾರನ್ನು ತಯಾರಿಸಲು ಮಾಹಿತಿಯನ್ನು ಆರೋಪಿಯೇ ಕೊಟ್ಟಿರುತ್ತಾರೆ . ಆರೋಪಿಗೆ ಕನ್ನಡ ಭಾಷೆ ಬಿಟ್ಟು ಬೇರೆ ಭಾಷೆ ಬರುವುದಿಲ್ಲ ಎಂದರೆ ಸರಿ . ಬಾಂಡ್ ಪೇಪರ ಎಷ್ಟು ರೂಪಾಯಿಗೆ ಖರೀದಿಸಿದ್ದರು ಆರೋಪಿಗೆ ಗೊತ್ತು . ಕರಾರು ಪತ್ರ ಟೈಪ್ ಮಾಡಿ ಸಹಿ ಹಾಕಿದ್ದಕ್ಕೆ ನಾನೇ ಸಾಕ್ಷಿ . ಅದನ್ನು ಗೋವಾದಲ್ಲಿ ನೋಟರಿ ಮಾಡಿದ್ದೇನೆ. ಯಾವ ನೋಟರಿ ಗೊತ್ತಿಲ್ಲ , ಮಡಗಾಂವದಲ್ಲಿ ಮಾಡಿದ್ದೇವೆ . ಕರಾರು ಪತ್ರವನ್ನು ಈವರೆಗೂ ಹಾಜರು ಪಡಿಸಿಲ್ಲ , ನೋಟರಿಯವರ ಸಾಕ್ಷಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ . ಡೊಮಿಂಗೊ ರೊಡ್ರಿಗಿಸ್ ಮತ್ತು ರೀನಾ ಡೊಮಿಂಗೊ ರೊಡ್ರಿಗಿಸ್ ಇವರು ಕೊಲ್ವಾದಲ್ಲಿ ವಾಸವಾಗಿದ್ದಾರೆ . ಡೊಮಿಂಗೊ ರೊಡ್ರಿಗಿಸ್ ಮತ್ತು ರೀನಾ ಡೊಮಿಂಗೊ ರೊಡ್ರಿಗಿಸ್ ಇವರ ಬೋಟಿನಲ್ಲಿ ಆರೋಪಿಯನ್ನು ಕೆಲಸಕ್ಕೆ ಕರೆದುಕೊಂಡ ಹೋದ ಬಗ್ಗೆ ಕರಾರು ಜೊತೆಗೆ ಚೆಕ್ ನ್ನು ಪಡೆದುಕೂಂಡಿರುತ್ತೇವೆ . ಒಂದೇ ಚೆಕ್ ನ್ನು ಪಡೆದುಕೊಂಡಿದ್ದೆವು . ಚೆಕ್ ನ ಮೊತ್ತವನ್ನು ಅಗ್ರಿಮೆಂಟ್ ಮಾಡುವಾಗ ಆರೋಪಿಯೇ ಬರೆದಿದ್ದರು .

ಅಗ್ರಿಮೆಂಟ್ ನಲ್ಲಿ ಚೆಕ್ ನಂಬರ ಹಾಗೂ ಮೊತ್ತವನ್ನು ನಮೂದಿಸಿದ್ದೇವೆ . ಬೋಟ್ ಕೆಲಸಕ್ಕೆ ಹೋದಾಗ ಆರೋಪಿ ಚೆಕ್ ನ್ನು ಕೊಟ್ಟಿರುತ್ತಾರೆ . ರಮೇಶ, ದಿನೇಶ ಅಂಬಿಗ ,ಚಂದ್ರಕಾಂತ ಹರಿಕಂತ್ರ ಇವರ ಚೆಕ್ ಗಳನ್ನು ಪಡೆದುಕೊಂಡಿಲ್ಲ. ಕರಾರು ಪತ್ರದಲ್ಲಿ ಇವರುಗಳು ಸಹಿ ಹಾಕಿದ್ದಾರೆ . ಕರಾರು ಪತ್ರ ಮಾಡಿದಾಗ ಚೆಕ್ ನ್ನು ಕೊಟ್ಟಿರುತ್ತಾರೆ. ರಮೇಶ ಅಂಬಿಗ, ದಿನೇಶ ಅಂಬಿಗ, ಚಂದ್ರಕಾಂತ ಇವರು ಬೋಟಿ ಕೆಲಸಕ್ಕೆ ಹೊಗಿದ್ದಾರೋ ಇಲ್ಲವೋ ನನಗೆ ಮಾಹಿತಿ ಇಲ್ಲ . ಆ ಬಗ್ಗೆ ಡೊಮಿಂಗೊ ರೊಡ್ರಿಗಿಸ್ ಮತ್ತು ರೀನಾ ಡೊಮಿಂಗೊ ರೊಡ್ರಿಗಿಸ್ ಕೂಡ ಅವರು ಬೋಟಿಗೆ ಹೋದ ಬಗ್ಗೆ ಮಾಹಿತಿ ಕೊಟ್ಟಿಲ್ಲ , ಆದರೆ ಆರೋಪಿಯೇ ಮೇನ್ . ಇದು ಮೀನುಗಾರಿಕೆಗೆ ಹೋಗಿರುವ ವ್ಯವಹಾರದ ಬಗ್ಗೆ ನಡೆದಿರುವ ವ್ಯವಹಾರ ಎಂದರೆ ಸರಿ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.